"ಗ್ರಾನಿ, ಗ್ರಾಂಡ್ಪಾ" ಎಂದರೇ ಹೊರತಾಗಿ ಹತ್ತಿರವಾಗಲಿಲ್ಲ. ಪ್ರೀತಿ ಚಿಗುರಲೇ ಇಲ್ಲ.

ಹದಿನೈದು ದಿನಗಳು ಕಳೆಯುವಷ್ಟರಲ್ಲೇ ಅಳಿಯನ ಬಣ್ಣ ಬಯಲಾಯಿತು. ಸಭ್ಯನಾಗಿ ವರ್ತಿಸಿದವ ನಂತರ ಮನೆಯಲ್ಲೇ ಇದ್ದ ಬಾರ್ ರೂಮ್‌ನಲ್ಲಿ ವಿಸ್ಕಿ ಸೇವಿಸಲಾರಂಭಿಸಿದ. ಅಚ್ಚರಿಪಟ್ಟ ದಂಪತಿಯನ್ನು ನೋಡಿ ಸುನಿತಾ, "ಇದೆಲ್ಲ ಇಲ್ಲಿ ಕಾಮನ್ನು. ಎಲ್ಲಾರೂ ತೊಗೋತಾರ" ಎಂದು ತಾನೂ ಒಂದು ಪೆಗ್ ಹಿಡಿದಳು. ದಂಗು ಬಡೆದವರು ಸುಧಾರಿಸಿಕೊಳ್ಳಲು ಸಮಯ ಬೇಕಾಯಿತು. ಮೆತ್ತಗೆ ಮಾಂಸಾಹಾರವೂ ಪ್ರಾರಂಭವಾಯಿತು. "ನಮಗೆಲ್ಲಾ ಭಾಳ ರೂಢಿಯಾಗೇದ. ಭಾಳ ದಿವ್ಸ ಬಿಡ್ಲಿಕ್ಕೆ ಆಗೂದಿಲ್ಲ" ಎಂದು ನಕ್ಕಳು ಸುನಿತಾ. ಹೊರಗೆ ಕುಳಿತುಕೊಳ್ಳುತ್ತಿದ್ದ ಶ್ರೀಪಾದರಿಗಿಂತ ಅಡಿಗೆ ಮನೆಯಲ್ಲಿ ಸುಳಿದಾಡುತ್ತಿದ್ದ ವೇದಾರಿಗೆ ಹೇಸಿಗೆ, ಸಂಕಟ. "ನನಗ ಬ್ಯಾರೇ ಭಾಂಡಿ ಕೊಡವಾ. ನಾ ಬ್ಯಾರೇ ಅಡಗಿ ಮಾಡ್ಕೋತೇನಿ" ಎಂದು ಬೇರೆಯೇ ಬೇಯಿಸಿಕೊಂಡರು. ಮುಂದೆ ಅವಳು ವಿಶೇಷ ಅಡಿಗೆ ಮಾಡಿದಾಗಲೆಲ್ಲ ಅವರು ವಾಸನೆ ತಡೆಯುತ್ತ ಮುಜುಗರದಿಂದಲೇ ತುತ್ತು ನುಂಗುತ್ತಿದ್ದರು. ತಮ್ಮ ಬಂಧ ಇಲ್ಲಿ ಬೆಸೆಯಲು ಸಾಧ್ಯವೇ ಇಲ್ಲವೆನಿಸಿತವರಿಗೆ. ತಾವು ಮದುವೆ ಮಾಡಿಕೊಟ್ಟ ಸುನಿತಾಳಿಗೂ ಇಂದಿನ ಸುನಿತಾಳಿಗೂ ಅಜಗಜಾಂತರವಿತ್ತು. ಈಗವಳು ಉಡುಗೆ ತೊಡುಗೆಯಲ್ಲಷ್ಟೇ ಅಲ್ಲ, ಸಂಸ್ಕೃತಿ, ಸಂಬಂಧಗಳಲ್ಲೂ ವಿದೇಶಕ್ಕೆ ಒಗ್ಗಿಕೊಂಡು ಅಪ್ಪಟ ವಿದೇಶೀಯಳಾಗಿದ್ದಳು. ಬದಲಾವಣೆ ವಿಪರೀತವಾಗಿ ಇರಿಸು ಮುರಿಸಾಗಿತ್ತು.

ಮುಖ್ಯ ವಿಷಯ ಚರ್ಚೆಗೆ ಬಂತು – "ಅನಿ ಹಿಂಗಂತಾಳ…" ಎಂದೆಲ್ಲ ಹೇಳಿದರು. ಸುನಿತಾ, "ದೇವರು ನನಗ ಬೇಕಾದಷ್ಟು ಕೊಟ್ಟಾನ. ನಿಮ್ಮ ಜೋಡಿ ನಾನೂ ಅಕಿಗೆ ಸಹಾಯ ಮಾಡ್ಲಿಕ್ಕತ್ತೀನಿ. ಆದ್ರ ಆ ಮನಿ ನಾವೆಲ್ಲಾ ಕೂಡಿ ಇದ್ದದ್ದು, ಆಡಿ ಬೆಳದದ್ದು. ಅಕಿಗೊಬ್ಬಾಕಿಗೇ ಕೊಟ್ರ ನಿಮ್ಮ ಪ್ರೀತಿ ನೀವು ಬರೇ ಅಕಿಗೆ ಕೊಟ್ಟಂಗ. ಅದೂ ದೇವ್ರ ಸಲವಾಗಿ ನೀವು ಅಕಿಗೆ ಮನಿ ಕೊಡೋದು ನನಗ ಸಮಾ ಕಾಣಸಾಂಗಿಲ್ಲ. ಅದರ ಬದ್ಲಿ ಜಪಾ ಮಾಡ್ರಿ. ತಪಾ, ಮಾನಸಪೂಜಾ, ಭಜನಿ ಬೇಕಾದಷ್ಟು ಬ್ಯಾರೇ ವಿಧಾನ ಅವ. ಯಾಕ… ನಾ ಹಿರೇ ಮಗಳು ಏನೂ ಅಲ್ಲೇನು?" ಎನ್ನುವಾಗಲೇ ಬಂದ ಸುಧೀರ, "ನಿಮ್ಮ ದೇವರ್ನ ನೀವು ಇಲ್ಲೇ ತರಬೇಕಾಗಿತ್ತು. ನಾನ ಪೂಜಿ ಮಾಡ್ತಿದ್ದೆ" ಎಂದು ಕೈಯಲ್ಲಿ ವಿಸ್ಕಿ ಹಿಡಿದೇ ನುಡಿದ. "ಶಾಂತಂ ಪಾಪಂ" ಎಂದ ಶ್ರೀಪಾದರು ಕೆನ್ನೆ ಬಡಿದುಕೊಂಡು, "ನೀವು ಇರ್ಲಿ ಬಿಡ್ರಿ. ನಾವು ಅಲ್ಲೇ ಏನರ ವ್ಯವಸ್ಥಾ ಮಾಡತೇವಿ" ಎಂದರು. ಸಮಸ್ಯೆ ಬಗೆಹರಿಯದೇ ಭಾರವಾದ ಹೃದಯದಿಂದ ಭಾರತಕ್ಕೆ ವಾಪಸ್ಸಾದರು. ವಿದೇಶ ಪರ್ವ ಮುಗಿದಿತ್ತು. ಅಕ್ಕನ ಮನೋಗತವನ್ನು ತಂಗಿಗೆ ತಿಳಿಸಿದಾಗ ಮುಖ ಬಿಗಿದಿತ್ತು. ಮುಂದೆ… ನಿಲ್ಲಲು ಸಾಧ್ಯವಾಗದೇ ಗದಗಿಗೆ ಮರಳಿದರು.

'ಇದಕ್ಕ ಬ್ಯಾರೇ ಏನರೆ ವಿಚಾರ ಮಾಡಬೇಕು' ಎಂದುಕೊಂಡ ಶ್ರೀಪಾದರು ಪತ್ನೀಸಮೇತರಾಗಿ ಗಾಣಗಾಪುರಕ್ಕೆ ಬಂದರು. ಗುರುಗಳ ದರ್ಶನದಿಂದ ಪುನೀತರಾದರು. 'ನೀನ ದಾರಿ ತೋರಸ್ಬೇಕಪಾ ದತ್ತಪ್ಪಾ. ನಾ ಯಃಕಶ್ಚಿತ್ ಮನಷಾ. ಏನ ಮಾಡೇನು?' ಎನ್ನುತ್ತ ಹನಿಗಣ್ಣಾದರು. ಆತ್ಮೀಯರಾಗಿದ್ದ ಭೀಮಭಟ್ಟರಲ್ಲೇ ಇಳಿದುಕೊಂಡು ಮಾಡಿದ್ದ ಸಾಖರಭಾತನ್ನು ಮಾಧುಕರಿ(ಭಿಕ್ಷೆ) ಹಾಕಿದರು. ಅವರಲ್ಲಿ ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳುತ್ತ, "ನೀವ ನಮ್ಮ ದತ್ತಪ್ಪನ್ನೂ ಇಟಗೊಂಡು ಪೂಜಿ ಮಾಡ್ರಿ" ಎಂದು ಬೇಡಿಕೊಂಡರು. ಭೀಮಭಟ್ಟರು "ಇಲ್ಲೆ ಬರ್ರಿ ಶ್ರೀಪಾದರಾವ್" ಎನ್ನುತ್ತ ತಮ್ಮ ದೇವರ ಮನೆ ತೋರಿಸಿದರು. ಅಲ್ಲಿ ದತ್ತಪ್ಪನ ಮೂರ್ತಿಗಳಷ್ಟೇ ಅಲ್ಲ, ಸಾಲಿಗ್ರಾಮಗಳೊಂದಿಗೆ ಇನ್ನೂ ಹಲವಾರು ದೇವರಿಂದ ದೇವರ ಮನೆ ತುಂಬಿ ಹೋಗಿತ್ತು.